KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/270426/2026/415 ದಿನಾಂಕ:25/06/2026

## ಸುತ್ತೋಲೆ

**ವಿಷಯ:** ಜೂನ್ 2026 ರಲ್ಲಿ ಜರುಗುವ ಸ್ನಾತಕೋತ್ತರ 2, ಮತ್ತು 4, ನೇ ಸೆಮಿಸ್ಟರ್‌ನ (ರೆಗ್ಯೂಲರ್/ರಿಪೀಟರ್) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ/ಶುಲ್ಕ ತುಂಬುವ ಅವಧಿಯನ್ನು ಕೊನೆಯ ಬಾರಿಗೆ ವಿಸ್ತರಿಸಿದ ಕುರಿತು.

**ಉಲ್ಲೇಖ:** 1) ಅಧಿಸೂಚನೆ ನಂ:/ಕವಿವಿ/ಪರೀಕ್ಷಾ/ಜಿಎಡಿ/2026/312 ದಿನಾಂಕ:08/06/2026
2) ಅಧಿಸೂಚನೆ ನಂ:/ಕವಿವಿ/ಪರೀಕ್ಷಾ/ಜಿಎಡಿ/2026/313 ದಿನಾಂಕ:08/06/2026
3) ಅಧಿಸೂಚನೆ ನಂ:/ಕವಿವಿ/ಪರೀಕ್ಷಾ/ಜಿಎಡಿ/2026/367 ದಿನಾಂಕ:18/06/2026

****@****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು/ಆಡಳಿತಾಧಿಕಾರಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಎಲ್ಲ ಸ್ನಾತಕೋತ್ತರ ಹಾಗೂ ಎಂ.ಸಿ.ಎ/ಎಂ.ಬಿ.ಎ/ಎಂ.ಬಿ.ಎ(ಲಾಜಿಸ್ಟಿಕ್ಸ್ ಮಾನೇಜಮೆಂಟ್) 2 ಮತ್ತು 4 ನೇ ಸೆಮಿಸ್ಟರ್ (ರೆಗ್ಯೂಲರ್/ರಿಪೀಟರ್) ಹಾಗೂ ಎಲ್ಲ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸುಗಳಿಗೆ ಲಿಖಿತ ಪರೀಕ್ಷೆಗಳನ್ನು ಜರುಗಿಸುವ ಸಲುವಾಗಿ ಉಲ್ಲೇಖಿತ ಅಧಿಸೂಚನೆಗಳ ಮೂಲಕ ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅಧಿಸೂಚನೆಯನ್ನು ದಂಡಸಹಿತವಾಗಿ ತುಂಬಲು ದಿನಾಂಕ:08/06/2026 ರಿಂದ 24/06/2026 ರ ವರೆಗೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಜುಲೈ 2026 ರಲ್ಲಿ ಜರುಗುವ ಎಲ್ಲ ಸ್ನಾತಕೋತ್ತರ ಪದವಿಗಳ 2, ಮತ್ತು 4, ನೇ ಸೆಮಿಸ್ಟರ್‌ನ ರೆಗ್ಯೂಲರ್/ರಿಪೀಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, **ಕಾರಣಾಂತರಗಳಿಂದ ಪರೀಕ್ಷಾ ಅರ್ಜಿ /ಶುಲ್ಕ ತುಂಬದೆ ಇರುವಂತಹ ವಿದ್ಯಾರ್ಥಿಗಳಿಗೆ ಈ ಕೆಳಕಾಣಿಸಿದ ದಂಡದೊಂದಿಗೆ ಅರ್ಜಿ ಸಲ್ಲಿಸಲು ದಿನಾಂಕ:27/06/2026 ರ ವರೆಗೆ ದಿನಾಂಕವನ್ನಾಗಿ ನಿಗದಿಪಡಿಸಿ ಕೊನೆಯ ಬಾರಿಗೆ ಅವಕಾಶ ನೀಡಲಾಗಿದೆ.**

| ಅ.ನಂ | ಸೆಮಿಸ್ಟರ್ | ದಂಡದ ಮೊತ್ತ |
|---|---|---|
| 1 | ಸ್ನಾತಕೋತ್ತರ ಪದವಿಗಳ 2 ಮತ್ತು 4 ನೇ ಸೆಮಿಸ್ಟರ್‌ನ ರೆಗ್ಯೂಲರ್/ರಿಪೀಟರ್ | 1) ಪ್ರತಿ ದಿನ ರೂ.1000/- ರಂತೆ ದಿನಾಂಕ:25/06/2026 ರಿಂದ 27/06/2026 ರ ವರೆಗೆ ಪರೀಕ್ಷಾ ಶುಲ್ಕವನ್ನು SBI Collect ಮುಖಾಂತರ ತುಂಬುವುದು. |

ಸದರ ವಿಷಯವನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಅರ್ಜಿ/ಶುಲ್ಕಗಳನ್ನು ತುಂಬಲು ತಿಳಿಸಲಾಗಿದೆ.

**ವಿಶೇಷ ಸೂಚನೆ:** ಪರೀಕ್ಷಾ ಅರ್ಜಿ /ಶುಲ್ಕ ತುಂಬಲು ಸದರಿ ಅವಧಿಯು ಕೊನೆಯ ಅವಕಾಶವಾಗಿರುವದರಿಂದ ಕೊನೆಯ **ದಿನಾಂಕ:27/06/2026** ರ ನಂತರದಲ್ಲಿ ಯಾವುದೇ ತರಹದ ಪರೀಕ್ಷಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅದಕ್ಕೆ ವಿದ್ಯಾರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.

Sd/- 25/06/2026
ಕುಲಸಚಿವರು(ಮೌಲ್ಯಮಾಪನ)

ಗೆ,
ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್‌ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

**ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ**

1) ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಂತರ್ಜಾಲದಲ್ಲಿ ಪ್ರಕಟಿಸುವುದು)
3) ಕುಲಪತಿಗಳ, ಕುಲಸಚಿವರ, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
4) ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.